2011–12– ₹ 3,28,07,000/–

2012–13– ₹ 3,16,75,000/–

2013–14– ₹ 4,61,81,000/–

ಈ) ಪ್ರತಿ ವರ್ಷ ಅರ್ಹ ಸಂಸ್ಥೆಗಳಿಗೆ ಸರ್ಕಾರವು ಅನುದಾನ ಬಿಡುಗಡೆ ಮಾಡುತ್ತಿದೆ.

ನಗರ ಪ್ರದೇಶ ವ್ಯಾಪ್ತಿಯಲ್ಲಿ ವಸತಿ ಸೌಲಭ್ಯ

237 (605), ಡಾ॥ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ಚಿಕ್ಕಬಳ್ಳಾಪುರ ಜಿಲ್ಲಾ ಕೇಂದ್ರವಾಗಿದ್ದು, ಇಲ್ಲಿನ ನಗರಸಭೆ ವ್ಯಾಪ್ತಿಯಲ್ಲಿ ವಸತಿ ಸೌಲಭ್ಯ ಕಲ್ಪಿಸಲು ನಿಗದಿಪಡಿಸಿರುವ ಅನುದಾನ ಎಷ್ಟು; ಎಷ್ಟು ಮನೆಗಳನ್ನು ನಿರ್ಮಿಸಲು ಅವಕಾಶ ಕಲ್ಪಿಸಲಾಗಿದೆ;

ಆ) ವಸತಿ ಸೌಲಭ್ಯ ಕಲ್ಪಿಸಲು ಇಲಾಖೆ ಹಮ್ಮಿಕೊಂಡಿರುವ ಯೋಜನೆಗಳು ಯಾವುವು; ಈ ಯೋಜನೆಗಳಲ್ಲಿ ನಗರ ಪ್ರದೇಶದಲ್ಲಿ ವಸತಿ ಕಲ್ಪಿಸಲು ಇರುವ ಅವಕಾಶ ಏನು;

ಇ) ನಗರದಲ್ಲಿ ವಸತಿ ಕಲ್ಪಿಸಲು ಮೀಸಲಿರುವ ಅನುದಾನದ ಬಳಕೆ ಆಗಿದೆಯೇ; ಆಗಿದ್ದಲ್ಲಿ, ಎಷ್ಟು ಅನುದಾನ ಬಳಕೆಯಾಗಿದೆ; ಕಳೆದ ಎರಡು ವರ್ಷದಲ್ಲಿ ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ; ಮುಂದಿನ ದಿನಗಳಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮ ಯಾವುವು (ವಿವರ ಒದಗಿಸುವುದು);

ಈ) ಚಿಕ್ಕಬಳ್ಳಾಪುರ ಜಿಲ್ಲಾ ಕೇಂದ್ರವಾಗಿರುವ ಚಿಕ್ಕಬಳ್ಳಾಪುರ ನಗರಸಭೆಗೆ ಹೆಚ್ಚಿನ ವಸತಿ ಸೌಲಭ್ಯ ಕಲ್ಪಿಸಲು ಪ್ರತ್ಯೇಕ ಜಮೀನು ಪಡೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಉ) ಇದುವರೆಗೂ ಎಷ್ಟು ಮನೆಗಳನ್ನು ನಿರ್ಮಿಸಲು ಆದೇಶ ನೀಡಲಾಗಿದೆ; ಆದೇಶ ನೀಡದಿದ್ದಲ್ಲಿ ಕಾರಣವೇನು (ವಿವರ ನೀಡುವುದು)?

ಶ್ರೀ ಡಾ॥ ಎಂ.ಹೆಚ್.ಅಂಬರೀಷ್ (ವಸತಿ ಸಚಿವರು)

ಅ) ಚಿಕ್ಕಬಳ್ಳಾಪುರ ನಗರಸಭೆಗೆ ವಾಜಪೇಯಿ ನಗರ ವಸತಿ ಯೋಜನೆಯಡಿ 2013–14 ಸಾಲಿನಲ್ಲಿ 125 ಮನೆಗಳ ಗುರಿಯನ್ನು ನಿಗದಿಪಡಿಸಿದೆ. ನಗರ ಆಶ್ರಯ ಸಮಿತಿಯು 95 ಫಲಾನುಭವಿಗಳನ್ನು ಆಯ್ಕೆ ಮಾಡಿ ನಿಗಮಕ್ಕೆ ನೀಡಿದೆ. ಮಂಜೂರು ಮಾಡಲಾದ 95 ಮನೆಗಳಿಗೆ ₹ 114 ಲಕ್ಷಗಳನ್ನು ನಿಗದಿಪಡಿಸಲಾಗಿದೆ.

ಆ) ವಸತಿ ಸೌಲಭ್ಯವನ್ನು ಕಲ್ಪಿಸಲು ವಸತಿ ಇಲಾಖೆಯು ಈ ಕೆಳಕಂಡ ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

1. ಬಸವ ವಸತಿ ಯೋಜನೆ

2. ಇಂದಿರಾ ಆವಾಸ್ ಯೋಜನೆ

3. ವಾಜಪೇಯಿ ನಗರ ವಸತಿ ಯೋಜನೆ

4. ವಿಶೇಷ ವಸತಿ ಯೋಜನೆ

ಮೇಲ್ಕಂಡ ಯೋಜನೆಗಳಲ್ಲಿ ನಗರ ಪ್ರದೇಶದಲ್ಲಿ ವಸತಿಯನ್ನು ಕಲ್ಪಿಸಲು ವಾಜಪೇಯಿ ನಗರ ವಸತಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ.

ಇ) ಚಿಕ್ಕಬಳ್ಳಾಪುರ ಜಿಲ್ಲೆಯ ನಗರ ಪ್ರದೇಶಕ್ಕೆ ಸಂಬಂಧಿಸಿದಂತೆ ವಾಜಪೇಯಿ ನಗರ ವಸತಿ ಯೋಜನೆ 2013–14ನೇ ಸಾಲಿನಲ್ಲಿ ನವೆಂಬರ್ 2014 ರ ಅಂತ್ಯಕ್ಕೆ ಒಟ್ಟು ₹ 216.83 ಲಕ್ಷಗಳು ಬಳಕೆಯಾಗಿದೆ.

ಕಳೆದ ಎರಡು ವರ್ಷಗಳಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ನಗರ ಪ್ರದೇಶದಲ್ಲಿ 288 ಮನೆಗಳನ್ನು ನಿರ್ಮಿಸಲಾಗಿದೆ.

ಈ ಯೋಜನೆಯಡಿ ಅನುದಾನದ ಲಭ್ಯತೆ ಅನುಸರಿಸಿ ಪ್ರತಿ ವರ್ಷ ಗುರಿಯನ್ನು ನಿಗದಿಪಡಿಸಲಾಗುತ್ತಿದೆ.

ಈ) ಈ ಬಗ್ಗೆ ಪ್ರಸ್ತಾವನೆ ಬಂದಿರುವುದಿಲ್ಲ.

ಉ) 2013–14ನೇ ಸಾಲಿನ ವಾಜಪೇಯಿ ನಗರ ವಸತಿ ಯೋಜನೆಯಡಿ ಚಿಕ್ಕಬಳ್ಳಾಪುರ ನಗರಸಭೆಗೆ 125 ಮನೆಗಳ ಗುರಿಯನ್ನು ನೀಡಲಾಗಿದೆ. ನಗರ ಆಶ್ರಯ ಸಮಿತಿಯ ಇದುವರೆಗೆ 95 ಫಲಾನುಭವಿಗಳನ್ನು ಆಯ್ಕೆ ಮಾಡಿದೆ. 95 ಮನೆಗಳನ್ನು ನಿರ್ಮಿಸಲು ಕಾರ್ಯಾದೇಶವನ್ನು ನೀಡಲಾಗಿದೆ.

ಪ್ರವಾಸಿ ತಾಣಗಳನ್ನು ಖಾಸಗಿಯವರಿಗೆ ವಹಿಸುವುದು

238 (606), ಡಾ॥ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ಕೆಲ ಸರ್ಕಾರಿ ಪ್ರವಾಸಿ ತಾಣಗಳನ್ನು ಖಾಸಗಿ ಸಂಸ್ಥೆಗಳ ಸಹಕಾರದೊಂದಿಗೆ ಅಭಿವೃದ್ಧಿಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ ಅಂತಹ ಸಂಸ್ಥೆಗಳ ಆಯ್ಕೆ ಪಾರದರ್ಶಕವಾಗಿ ಇರಲಿದೆಯೇ; ಆಯ್ಕೆಗೆ ಯಾವ ಮಾನದಂಡ ಅನುಸರಿಸಲಾಗುವುದು;

ಇ) ಯಾವ ಯಾವ ಸರ್ಕಾರಿ ತಾಣವನ್ನು ಖಾಸಗಿಯವರ ಮೂಲಕ ಅಭಿವೃದ್ಧಿಪಡಿಸಲು ನಿರ್ಧರಿಸಲಾಗಿದೆ (ಸಂಪೂರ್ಣ ವಿವರ ನೀಡುವುದು)

ಈ) ಇಂತಹ ತಾಣಗಳಲ್ಲಿ ಪ್ರಸ್ತುತವಿರುವ ಸೌಲಭ್ಯಗಳು ಏನು; ಮುಂದೆ ಹೊಸದಾಗಿ ಸಿಗುವ ಅನುಕೂಲಗಳು ಯಾವುವು (ವಿವರ ನೀಡುವುದು)